ಬೆಂಗಳೂರು ನಗರದಲ್ಲಿ ಭಿಕ್ಷಾಟನಾ ಶುಲ್ಕದಿಂದ ಬಂದ ಹಣ

2706 (3059) ಶ್ರೀ ಸುರೇಶ್ ಕುಮಾರ್ ಎಸ್. (ರಾಜಾಜಿನಗರ) :— ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಬೆಂಗಳೂರು ನಗರದಲ್ಲಿ ಭಿಕ್ಷಾಟನಾ ಶುಲ್ಕ ಸಂಗ್ರಹವಾಗುತ್ತಿರುವುದು ನಿಜವೇ?

3) ಈ ಹಣವನ್ನು ಸಂಗ್ರಹ ಮಾಡುತ್ತಿರುವ ಉದ್ದೇಶವೇನು?

3) ಸಂಗ್ರಹವಾದ ಈ ಹಣವನ್ನು ಸಮಾಜ ಕಲ್ಯಾಣ ಇಲಾಖೆಗೆ ವರ್ಗಾಯಿಸಿಲ್ಲದಿರುವುದು ನಿಜವೇ? ಈ ಬಾಬ್ತಿನಲ್ಲಿ ಬಾಕಿ ಇರುವ ಹಣವೆಷ್ಟು?

ಶ್ರೀ ಕಾಗೋಡು ತಿಮ್ಮಪ್ಪ (ಸಮಾಜ ಕಲ್ಯಾಣ ಸಚಿವರು) :—

1) ಹೌದು

2) ಕರ್ನಾಟಕ ಭಿಕ್ಷಾಟಣೆ ನಿಷೇದ ಅಧಿನಿಯಮ 1975ರ ಈ ಕಾಯಿದೆಯ ಅನ್ವಯ ನಗರದಲ್ಲಿ ಬಂಧಿಸಿ ತರುವ ಭಿಕ್ಷುಕರಿಗೆ ಉಚಿತ ಉಟ, ಹಾಸಿಗೆ ಮತ್ತು ಹೊದಿಕೆ ಮುಂತಾದವುಗಳಿಗೆ ನೀಡಲು ವೆಚ್ಚ ಮಾಡಲಾಗುತ್ತಿದೆ. ಅಲ್ಲದೆ ಅವರಿಗೆ ವೃತ್ತಿಪರ ತರಬೇತಿಯನ್ನು ಸಹ ನೀಡಲಾಗುತ್ತಿದೆ.

3) ಬೆಂಗಳೂರು ಮಹಾನಗರ ಪಾಲಿಕೆಯು ಸಂಗ್ರಹಿಸುವ ಭಿಕ್ಷುಕರ ಕರದ ಹಣವನ್ನು ಸಮಾಜ ಕಲ್ಯಾಣ ಇಲಾಖೆಗೆ ವರ್ಗಾಯಿಸುವುದಿಲ್ಲ, ಆದರೆ ಈ ಇಲಾಖೆಯು ನಿಧಿಗೆ ಒಳಪಟ್ಟಿರುವ ಕೇಂದ್ರ ಪರಿಹಾರ ಸಮಿತಿಯ ನಿಧಿಗೆ ಆಲ್ಪ ಪ್ರಮಾಣದಲ್ಲಿ ವರ್ಗಾಯಿಸಲಾಗುತ್ತಿದೆ. ಈ ಬಾಬ್ತಿನಲ್ಲಿ ಬರಬೇಕಾಗಿರುವ ಬಾಕಿ ಭಿಕ್ಷುಕರ ಕರದ ಮೊಬಲಗು ಜೂನ್ 2000 ರ ಅಂತ್ಯದವರೆಗೆ ರೂ.7,28,52,326-00 ಗಳು ಇರುತ್ತದೆ.

ಪಶ್ಚಿಮ ಘಟ್ಟದ ಪರ್ವತ ಶ್ರೇಣಿಯಲ್ಲಿ ಗಣಿಗಾರಿಕೆಗೆ ನೀಡಿರುವ ಅನುಮತಿಯನ್ನು ರದ್ದು ಮಾಡುವುದು

2707 (3058) ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಅಂಕೋಲ) :— ಮಾನ್ಯ ಗಣಿ ಮತ್ತು ಭೂವಿಜ್ಞಾನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಪಶ್ಚಿಮಘಟ್ಟದ ಪರ್ವತ ಶ್ರೇಣಿ ಪರಿಸರದಲ್ಲಿ ಹೊಸದಾಗಿ ಗಣಿಗಾರಿಕೆ ಅನುಮತಿ ನೀಡಬಾರದೆಂದು ಭಾರತೀಯ ವಿಜ್ಞಾನ ಸಂಸ್ಥೆಯ ತಜ್ಞರ ತಂಡ ರಾಜ್ಯ ಸರ್ಕಾರಕ್ಕೆ ಶಿಫಾರಸ್ಸು ಮಾಡಿದೆಯೇ;